PART – V
ENVIRONMENTAL SCIENCE

121. ಈ ಕೆಳಗಿನ ಯಾವ ಲಕ್ಷಣಗಳು "ಸಾಸಿವೆ ಸಸ್ಯ"ದಲ್ಲಿ ಕಂಡುಬರುತ್ತವೆ ?

(1) ತಾಯಿ ಬೇರು, ಜಾಲಬಂಧ ವಿನ್ಯಾಸ, ತ್ರಿದಳ ಪುಷ್ಪ

(2) ತಾಯಿ ಬೇರು, ಜಾಲಬಂಧ ವಿನ್ಯಾಸ, ಪಂಚದಳ ಪುಷ್ಪ

(3) ತಂತು ಬೇರು, ಜಾಲಬಂಧ ವಿನ್ಯಾಸ, ತ್ರಿದಳ ಪುಷ್ಪ

(4) ತಾಯಿ ಬೇರು, ಸಮ ವಿನ್ಯಾಸ, ಪಂಚದಳ ಪುಷ್ಪ

122. 'ಅಜೋಲ್ಲಾ' ಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

(1) ಅಪುಷ್ಪಿಸಸ್ಯ , ಕೀಟಹಾರಿ, ನೆಲವಾಸಿ

(2) ಶೈವಲ, ಜೈವಿಕ ಗೊಬ್ಬರ, ಜಲವಾಸಿ

(3) ಅಪುಷ್ಪಿಸಸ್ಯ , ಜೈವಿಕ ಗೊಬ್ಬರ, ಜಲವಾಸಿ

(4) ಹಾವಸೆ ಸಸ್ಯ, ಜೈವಿಕ ಗೊಬ್ಬರ, ತೇವಾಂಶಭರಿತ ಮಣ್ಣು

123. ಈ ಕೆಳಗಿನ ಯಾವ ಜೀವಿಗಳು ಸಾಗರದಲ್ಲಿ ಉತ್ಪಾದಕಗಳಾಗಿವೆ ?

(1) ಸಸ್ಯಪ್ಲವಕಗಳು (Phytoplanktons)

(2) ನೆಕ್ಟಾನ್‌ಗಳು (Nektons)

(3) ಜಲತಳ ಜೀವಿಗಳು (Benthos)

(4) ಪ್ರಾಣಿ ಪ್ಲವಕಗಳು (Zooplanktons)

124. ಈ ಕೆಳಗಿನ ಯಾವ ಪ್ರಕ್ರಿಯೆಯು ಸಸ್ಯಗಳಲ್ಲಿ ನಡೆಯುತ್ತದೆ ?

(1) ಆವೀಕರಣ ಪ್ರಕ್ರಿಯೆ

(2) ಬಾಷ್ಪೀಕರಣ ಕ್ರಿಯೆ

(3) ಉತ್ಪತನ ಕ್ರಿಯೆ

(4) ಸಾಂದ್ರೀಕರಣ ಕ್ರಿಯೆ

125. ಕೊಟ್ಟಿರುವ ವೆನ್ ಚಿತ್ರದಲ್ಲಿ, 'X' ಸ್ಥಳದಲ್ಲಿ ಕಂಡುಬರುವ ಪ್ರಾಣಿಯನ್ನು ಹೆಸರಿಸಿ :



(1) ಕಾಟ್ಲಾ

(2) ಲೋಳೆ ಮೀನು

(3) ಎಕಿಡ್ನಾ

(4) ಹಾವು

www.kpscvaani.com

126. ಈ ಕೆಳಗಿನವುಗಳಲ್ಲಿ ಸರಿಯಾದ ಹೊಂದಾಣಿಕೆ ಯಾವುದು ?

(1) ಜೀವಸತ್ವ A → ಹೃದಯ ಮತ್ತು ಜೀರ್ಣನಾಳದ ರಕ್ಷಣೆ

(2) ಜೀವಸತ್ವ B → ಹಲ್ಲು ಮತ್ತು ವಸಡುಗಳ ರಕ್ಷಣೆ

(3) ಜೀವಸತ್ವ C → ಕಣ್ಣಿನ ದೃಷ್ಟಿ ಮತ್ತು ಚರ್ಮದ ರಕ್ಷಣೆ

(4) ಜೀವಸತ್ವ D → ಮೂಳೆ ಮತ್ತು ಹಲ್ಲಿನ ರಕ್ಷಣೆ

127. ಕಾಲಂ– A ನಲ್ಲಿ ಕೊಟ್ಟಿರುವ ಪ್ರದೇಶಗಳನ್ನು ಕಾಲಂ – B ನಲ್ಲಿ ಕೊಟ್ಟಿರುವ ಮನೆಗಳೊಂದಿಗೆ ಹೊಂದಿಸಿ :

ಕಾಲಂ – A	**ಕಾಲಂ – B**
A) ಧ್ರುವ ಪ್ರದೇಶಗಳು	P) ಬಿಡಾರಗಳು
B) ಮರುಭೂಮಿ	Q) ಇಗ್ಲೂಗಳು
C) ಪ್ರವಾಹ ಪೀಡಿತ ಪ್ರದೇಶಗಳು	R) ಮರದಿಂದ ಮಾಡಿದ ಮನೆಗಳು
D) ಭೂಕಂಪನ ಪ್ರದೇಶಗಳು	S) ಮರದ ಕಾಲುಗಳ ಮನೆಗಳು

(1) A – Q, B – P, C – S, D – R (2) A – Q, B – P, C – R, D – S

(3) A – Q, B – S, C – P, D – R (4) A – Q, B – S, C – R, D – P

128. ಕೊಟ್ಟಿರುವ ಚಿತ್ರದಲ್ಲಿ ಗ್ರಂಥಿ 'ಬ' ವು ಈ ಕೆಳಗಿನ ಹಾರ್ಮೋನುಗಳಲ್ಲಿ ಒಂದನ್ನು ಸ್ರವಿಸುತ್ತದೆ.



(1) ಇನ್ಸುಲಿನ್ (2) ಗ್ಲುಕಗಾನ್ (3) ಅಡ್ರಿನಾಲಿನ್ (4) ಪ್ರೊಜೆಸ್ಟಿರಾನ್

129. ಭಾರತದಲ್ಲಿ ಪ್ರಮುಖವಾದ ಸಾರ್ವಜನಿಕ ಸಾರಿಗೆ ಎಂದರೆ

(1) ವಿಮಾನ (2) ರೈಲು (3) ಹಡಗು (4) ಬಸ್

130. ನಮ್ಮ ರಾಷ್ಟ್ರ ಲಾಂಛನದಲ್ಲಿ ನಾಲ್ಕು ಸಿಂಹಗಳು ಪರಸ್ಪರ ವಿರುದ್ಧ ಮುಖಮಾಡಿ ನಿಂತಿವೆ, ಈ ಲಾಂಛನದ ಕೆಳಭಾಗದಲ್ಲಿ ಮೂರು ಸಂಕೇತಗಳು ಒಂದೇ ಸಾಲಿನಲ್ಲಿ ಕಂಡುಬರುತ್ತವೆ. ಅವುಗಳೆಂದರೆ

(1) ಆನೆ, ಚಕ್ರ ಮತ್ತು ಗೂಳಿ (2) ನವಿಲು, ಚಕ್ರ ಮತ್ತು ಕಮಲದ ಹೂ

(3) ಕುದುರೆ, ಚಕ್ರ ಮತ್ತು ಗೂಳಿ (4) ಕುದುರೆ, ಚಕ್ರ ಮತ್ತು ಆನೆ

131. ಸಮುದ್ರದಲ್ಲಿ ಉಬ್ಬರ ಮತ್ತು ಇಳಿತಗಳು ಉಂಟಾಗಲು ಕಾರಣ

(1) ಗುರುತ್ವಾಕರ್ಷಣ ಬಲ (2) ಭೂಮಿಯ ಭ್ರಮಣೆ

(3) ಚಂದ್ರನ ಭ್ರಮಣೆ (4) ಗ್ರಹಗಳ ಚಲನೆ

www.kpscvaani.com

132. ಆಗಿಂದಾಗ್ಗೆ ಪ್ರವಾಹ ಉಂಟಾಗುವ ಪ್ರದೇಶಗಳಲ್ಲಿ ವಾಸಿಸುವ ಜನರು ತಮ್ಮನ್ನು ಪ್ರವಾಹದಿಂದ ರಕ್ಷಿಸಿಕೊಳ್ಳಲು, ಈ ಕೆಳಗಿನ ಒಂದನ್ನು ನಿರ್ಮಿಸಿಕೊಳ್ಳುವರು

(1) ಮರಗಳ ಮೇಲೆ ಮನೆಗಳು
(2) ಬಿದಿರು ಮತ್ತು ಮರದಿಂದ ಮಾಡಿದ ಮನೆಗಳು
(3) ಮರಗಾಲುಗಳಿಂದ ಮಾಡಿದ ಮನೆಗಳು
(4) ದೋಣಿ ಮನೆಗಳು

133. ಈ ಕೆಳಗಿನವುಗಳಲ್ಲಿ ಯಾವುದು ಹಸಿರು ಮನೆ ಅನಿಲವಲ್ಲ ?

(1) ನೈಟ್ರೋಜನ್
(2) ಮೀಥೇನ್
(3) ನೈಟ್ರೋಜನ್ ಡೈ ಆಕ್ಸೈಡ್
(4) ಸಿ. ಎಫ್. ಸಿ. ಗಳು

134. ಈ ಕೆಳಗಿನ ಒಂದು ಗುಂಪಿನ ದೇಶಗಳಲ್ಲಿ ಕರ್ಕಾಟಕ ಸಂಕ್ರಾಂತಿ ವೃತ್ತವು ಹಾದು ಹೋಗುತ್ತದೆ.

(1) ಭಾರತ ಮತ್ತು ಇರಾನ್
(2) ಭಾರತ ಮತ್ತು ಪಾಕಿಸ್ತಾನ
(3) ಭಾರತ ಮತ್ತು ಸೌದಿ ಅರೇಬಿಯಾ
(4) ಭಾರತ ಮತ್ತು ಇರಾಕ್

135. ಬಿಟಿ-ಬದನೆ, ಬಿಟಿ-ಹತ್ತಿ ಮತ್ತು ಬಿಟಿ-ಅಕ್ಕಿ , ಇವುಗಳಲ್ಲಿ ಬಿಟಿ-ಯ ವಿಸ್ತೃತ ರೂಪವು

(1) ಬಯೋಟೆಕ್ನಾಲಾಜಿಕಲ್
(2) ಭಾರತ್ ಟ್ರೇಡ್
(3) ಬ್ರಿಟಿಷ್ ಟ್ರೇಡ್
(4) ಬೆಸಿಲಸ್ ಥುರೆಂಜಿಎನ್ಸಿಸ್

136. ಈ ಕೆಳಗಿನವುಗಳಲ್ಲಿ ಒಂದು ವಿಭಕ್ತ ಕುಟುಂಬವನ್ನು ತಿಳಿಸುತ್ತದೆ

(1) 1950 ರ ನಂತರ ಕಂಡುಬಂದ ಕುಟುಂಬ
(2) ಪೋಷಕರು ಮತ್ತು ಅವರ ಮಕ್ಕಳನ್ನು ಮಾತ್ರ ಒಳಗೊಂಡ ಕುಟುಂಬ
(3) ಪೋಷಕರು, ಮಕ್ಕಳು ಮತ್ತು ಅಜ್ಜಿತಾತಂದಿರನ್ನು ಒಳಗೊಂಡ ಕುಟುಂಬ
(4) ಗಂಡ ಮತ್ತು ಹೆಂಡತಿಯನ್ನು ಮಾತ್ರ ಒಳಗೊಂಡ ಕುಟುಂಬ

137. ಈ ಕೆಳಗಿನ ಯಾವುದು ವಿಧುರಯರಿಗೆ ತಮ್ಮ ಸಂಗಾತಿಯ ಮರಣಾನಂತರ ಅತ್ಯಂತ ತೀವ್ರತರ ಸಮಸ್ಯೆ ಎಂದು ಕಂಡು ಬಂದಿದೆ ?

(1) ಒಂಟಿತನ
(2) ಸಂಗಾತಿಯ ಮರಣ ನಷ್ಟ ಸ್ವೀಕಾರ
(3) ಒಂಟಿಯಾಗಿ ಸ್ಥಳಗಳಿಗೆ ಹೋಗುವುದು / ಕೆಲಸ ಮಾಡುವುದು
(4) ಮನೆಯ ಕೆಲಸಗಳು

138. ಮಕ್ಕಳ ಮೇಲೆ ಪ್ರಭಾವ ಬೀರುವ ಪ್ರಮುಖ ಸಾಮಾಜೀಕರಣ ಅಂಶ ಯಾವುದು ?

(1) ಮಾಧ್ಯಮ
(2) ಸಮಾನ ವಯಸ್ಕರ ಗುಂಪು
(3) ಕುಟುಂಬ
(4) ಪವಿತ್ರ ಸ್ಥಳಗಳು

139. ಈ ಕೆಳಗಿನ ಯಾವ ಒಂದು ವಿಧಾನವು ಪರಿಸರ ಅಧ್ಯಯನದ ವಿಧಾನವಲ್ಲ ?

(1) ವೀಕ್ಷಣೆ
(2) ಊಹೆ / ಕಲ್ಪನೆ
(3) ಸಾಂಪ್ರದಾಯಿಕ ಜ್ಞಾನ
(4) ಸಂಪನ್ಮೂಲ ವ್ಯಕ್ತಿಗಳ ಜೊತೆ ಸಂವಾದ

www.kpscvaani.com

140. ಪರಿಸರ ಅಧ್ಯಯನ ತರಗತಿಯಲ್ಲಿ ''ಮಣ್ಣು'' ವಿಷಯವನ್ನು ಬೋಧಿಸುವಾಗ, ಮಣ್ಣಿನ ವಿಧಗಳು ಮತ್ತು ಮಣ್ಣಿನ ಸಂರಕ್ಷಣೆ ಬಗ್ಗೆ ಶಿಕ್ಷಕರು ಪಾತ್ರಾಭಿನಯದ ಚಟುವಟಿಕೆ ಏರ್ಪಡಿಸುತ್ತಾರೆ. ಈ ಚಟುವಟಿಕೆಯ ಪ್ರಮುಖ ಉದ್ದೇಶವೆಂದರೆ

(1) ಕಲಿಕಾ ಪ್ರಕ್ರಿಯೆಯಲ್ಲಿ ಏಕತಾನತೆಯನ್ನು ಹೋಗಲಾಡಿಸುವುದು

(2) ಮಣ್ಣಿನ ವಿಧಗಳ ಮತ್ತು ಮಣ್ಣಿನ ಸಂರಕ್ಷಣೆಯ ಬಗ್ಗೆ ಕಲಿಕಾರ್ಥಿಯ ಜ್ಞಾನವನ್ನು ಹೆಚ್ಚಿಸುವುದು

(3) ಕಲಿಕಾರ್ಥಿಯ ಸಾಮಾಜಿಕ ಕೌಶಲಗಳನ್ನು ಅಭಿವೃದ್ಧಿಗೊಳಿಸುವುದು

(4) ಕಲಿಕಾ ಪ್ರಕ್ರಿಯೆಯಲ್ಲಿ ಕಲಿಕಾರ್ಥಿಯ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸುವುದು

141. ಐದನೇ ತರಗತಿಯ ಪರಿಸರ ಅಧ್ಯಯನದ 'ಆಶ್ರಯ ಮತ್ತು ಉಡುಪು' ಎಂಬ ಘಟಕದ '**ಆಲೋಚಿಸಿ**' ಭಾಗದಲ್ಲಿ ಈ ಕೆಳಗಿನ ಹೇಳಿಕೆ ಕೊಡಲಾಗಿದೆ :

''ಬೇಸಿಗೆ ಕಾಲದಲ್ಲಿ ಹತ್ತಿ ಬಟ್ಟೆಗಳನ್ನು ಧರಿಸುವುದು ಸೂಕ್ತ'' ಈ ಹೇಳಿಕೆಯ ಪ್ರಮುಖ ಉದ್ದೇಶ

(1) ವಿದ್ಯಾರ್ಥಿಗಳು ಮುಂದಿನ ಹಂತದ ಅಧ್ಯಯನಕ್ಕಾಗಿ ತರಬೇತುಗೊಳಿಸುವುದು

(2) ಪ್ರತಿಯೊಬ್ಬ ವಿದ್ಯಾರ್ಥಿಯು ಬೇಸಿಗೆಯಲ್ಲಿ ಹತ್ತಿಬಟ್ಟೆಗಳನ್ನು ಧರಿಸುವಂತೆ ಪ್ರೋತ್ಸಾಹಿಸುವುದು

(3) ನೈಜ ಜೀವನದ ಅಗತ್ಯತೆಗಳನ್ನು ಅರ್ಥೈಸಿಕೊಳ್ಳುವ ಕೌಶಲ ಮತ್ತು ಕಲ್ಪನಾಶಕ್ತಿಯನ್ನು ಉತ್ತೇಜಿಸುವುದು

(4) ವಿವಿಧ ಋತುಗಳಲ್ಲಿ ಧರಿಸಬಹುದಾದ ಉಡುಪುಗಳ ಬಗೆಗಿನ ಜ್ಞಾನವನ್ನು ವಿದ್ಯಾರ್ಥಿಗಳಲ್ಲಿ ಅಳೆಯುವುದು

142. ನಿರಂತರ ಮೌಲ್ಯಮಾಪನದಲ್ಲಿ ಈ ಕೆಳಗಿನ ಯಾವ ಅಂಶಗಳನ್ನು ಪರಿಗಣಿಸಲಾಗುತ್ತದೆ ?

(1) ಮಗುವಿನ ಬೆಳವಣಿಗೆ ಮತ್ತು ಅಭಿವೃದ್ಧಿ (2) ಮಗುವಿನ ಎಲ್ಲಾ ವರ್ತನೆಗಳ ಅವಲೋಕನ

(3) ಮಗುವಿನ ಪಠ್ಯ ಸಂಯೋಜಿತ ಮೌಲ್ಯಮಾಪನ (4) ಮಗುವಿನ ಸಹಪಠ್ಯ ಸಂಯೋಜಿತ ಮೌಲ್ಯಮಾಪನ

143. ಈ ಕೆಳಗಿನ ಯಾವುದು ರೂಪಣಾತ್ಮಕ ಮೌಲ್ಯಮಾಪನ ವಿಧಾನವಲ್ಲ ?

(1) ಇದು ನೈದಾನಿಕ ಪರೀಕ್ಷೆ ಮತ್ತು ಪರಿಹಾರ ಬೋಧನೆಗಳನ್ನೊಳಗೊಂಡಿದೆ

(2) ಇದು ರಸಪ್ರಶ್ನೆ ಮತ್ತು ಗೃಹಕಾರ್ಯಗಳನ್ನೊಳಗೊಂಡಿದೆ

(3) ಇದು ಸೆಮಿಸ್ಟರ್‌ನ ಕೊನೆಯಲ್ಲಿ ಅಥವಾ ವರ್ಷದ ಕೊನೆಯಲ್ಲಿ ನಡೆಸುವ ಪರೀಕ್ಷೆಯನ್ನೊಳಗೊಂಡಿದೆ

(4) ಇದು ಯೋಜನೆ ಮತ್ತು ನಿಯೋಜಿತ ಕಾರ್ಯಗಳನ್ನೊಳಗೊಂಡಿದೆ

144. ಪ್ರಾಥಮಿಕ ಹಂತದಲ್ಲಿ ಪರಿಸರ ಅಧ್ಯಯನವು ಈ ಕೆಳಗಿನ ಯಾವ ಅಂಶವನ್ನು ಒಳಗೊಂಡಿರಬೇಕು ?

(1) ಅಭ್ಯಾಸಕ್ಕಾಗಿ ಹೆಚ್ಚಿನ ಪ್ರಶ್ನೆಗಳನ್ನು ಒಳಗೊಂಡಿರುವುದು

(2) ನಿರ್ದಿಷ್ಟ ಪದಗಳಿಗೆ ಸರಿಯಾದ ವ್ಯಾಖ್ಯಾನ ನೀಡಲು ಹೆಚ್ಚಿನ ಪ್ರಾಮುಖ್ಯತೆ ನೀಡುವುದು

(3) ಸುತ್ತಮುತ್ತಲಿನ ಪರಿಸರವನ್ನು ಅನ್ವೇಶಿಸುವಂತಹ ಅವಕಾಶಗಳನ್ನು ಒದಗಿಸುವುದು

(4) ಪರಿಕಲ್ಪನೆಗಳ ವಿವರಣೆಯ ಬಗ್ಗೆ ಹೆಚ್ಚು ಗಮನ ಹರಿಸುವುದು

145. ನಾಲ್ಕನೇ ತರಗತಿಯ ಪರಿಸರ ಅಧ್ಯಯನ ಪುಸ್ತಕದಲ್ಲಿ ವಿಜ್ಞಾನ ಮತ್ತು ಸಮಾಜ ವಿಜ್ಞಾನದ ಪರಿಕಲ್ಪನೆಗಳನ್ನು ಒಟ್ಟಾಗಿ ಕೊಡಲಾಗಿದೆ. ಇದರ ಪ್ರಮುಖ ಉದ್ದೇಶವೆಂದರೆ

(1) ಪಠ್ಯವಿಷಯಗಳ ಸಂಖ್ಯೆಯನ್ನು ಕಡಿಮೆ ಮಾಡಲು (2) ಶಾಲಾ ಬ್ಯಾಗ್‌ನ ಹೊರೆ ಕಡಿಮೆ ಮಾಡಲು

(3) ಶಿಕ್ಷಕರ ಸಂಖ್ಯೆಯನ್ನು ಕಡಿಮೆ ಮಾಡಲು (4) ವಿಷಯಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲು

www.kpscvaani.com

146. ಐದನೇ ತರಗತಿಯ ಪರಿಸರ ಅಧ್ಯಯನ ವಿಷಯದ ಪ್ರತಿ ಅಧ್ಯಾಯದಲ್ಲಿನ ಚಟುವಟಿಕೆ/ ಪ್ರಯೋಗ / ಯೋಜನೆಗಳು ಕಲಿಕೆಯ ವೈಜ್ಞಾನಿಕ ಶಬ್ದಗಳು ಮತ್ತು ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳುವಲ್ಲಿ ಸಹಾಯ ಮಾಡುತ್ತವೆ. ಇದು ಕಲಿಕೆಯ ಈ ಕೆಳಗಿನ ತತ್ವದ ಮೇಲೆ ಆಧರಿಸಿದೆ

(1) ಕೇಳಿ – ಕಲಿ (2) ಮಾಡಿ – ಕಲಿ (3) ಓದಿ – ಕಲಿ (4) ನೋಡಿ – ಕಲಿ

147. ಪರಿಸರ ಅಧ್ಯಯನ ವಿಷಯದ ''ಸಸ್ಯಗಳಲ್ಲಿ ಬಾಷ್ಪೀಕರಣ'' ಪರಿಕಲ್ಪನೆಯನ್ನು ಮೌಲ್ಯಮಾಪನ ಮಾಡಲು ಈ ಕೆಳಗಿನ ಯಾವ ತಂತ್ರವನ್ನು ಬಳಸಬಹುದಾಗಿದೆ ?

(1) ರಸಪ್ರಶ್ನೆ ಕೇಳುವುದು
(2) ಗೃಹನಿಯೋಜಿತ ಕಾರ್ಯ
(3) ನೇರಾನುಭವ (ಹಸ್ತದಿಂದ ಮಾಡುವ) ಚಟುವಟಿಕೆ
(4) ಲಿಖಿತ ಪರೀಕ್ಷೆ

148. ಐದನೇ ತರಗತಿಯ ಪರಿಸರ ಅಧ್ಯಯನ ಪಠ್ಯದಲ್ಲಿ ಬಾಕ್ಸ್‌ಗಳಲ್ಲಿ ನೀಡಲಾಗಿರುವ ***ಪದ ಸಹಾಯ, ಇದನ್ನು ತಿಳಿಯಿರಿ*** ಮತ್ತು ***ಆಲೋಚಿಸಿ*** ಇಂತಹ ಅಂಶಗಳು ಕಲಿಕಾರ್ಥಿಯ ಈ ರೀತಿಯ ಕಲಿಕೆಗೆ ಪ್ರೋತ್ಸಾಹಿಸುತ್ತವೆ

(1) ಪರಿಕಲ್ಪನಾ ಕಲಿಕೆ ಮತ್ತು ಕಡ್ಡಾಯ ಕಲಿಕೆ
(2) ಸಮೂಹ ಕಲಿಕೆ ಮತ್ತು ಅವಲಂಬಿತ ಕಲಿಕೆ
(3) ಸ್ವ-ಕಲಿಕೆ ಮತ್ತು ಸಹಭಾಗಿತ್ವದ ಕಲಿಕೆ
(4) ಪ್ರೋತ್ಸಾಹದಾಯಕ ಕಲಿಕೆ ಮತ್ತು ವೈವಿಧ್ಯಮಯ ಕಲಿಕೆ

149. ಈ ಕೆಳಗಿನವುಗಳಲ್ಲಿ ಯಾವುದು ಸಿ.ಸಿ.ಇ.ಯ **ಉದ್ದೇಶವಲ್ಲ** ?

(1) ವಾರ್ಷಿಕ ಪರೀಕ್ಷೆ ನಡೆಸಿ, ಮಗುವನ್ನು ಮುಂದಿನ ತರಗತಿಗೆ ತೇರ್ಗಡೆಗೊಳಿಸುವುದು
(2) ಮಗುವಿನ ಕೊರತೆ ಹಾಗೂ ಸಾಧನೆಗಳನ್ನು ಗಮನಿಸಿ ಸೂಕ್ತ ಹಿಮ್ಮಾಹಿತಿ ನೀಡುವುದು
(3) ಮಗುವನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳುವುದು
(4) ಮಗುವಿನ ಸಮಗ್ರ ವ್ಯಕ್ತಿತ್ವವನ್ನು ರೂಪಿಸುವುದು

150. ''ಸೂಕ್ಷ್ಮಜೀವಿಗಳು ಎಲ್ಲೆಡೆ ಕಂಡುಬರುತ್ತವೆ'' ಎಂಬ ಪರಿಕಲ್ಪನೆಯನ್ನು ಬೋಧಿಸುವಾಗ ಶಿಕ್ಷಕರು ವಿದ್ಯಾರ್ಥಿಗಳಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾರೆ

A) ಸೂಕ್ಷ್ಮಜೀವಿಗಳು ಮಣ್ಣಿನಲ್ಲಿ ಕಂಡುಬರುತ್ತವೆಯೇ ?
B) ಸೂಕ್ಷ್ಮಜೀವಿಗಳು ನೀರಿನ ಒಳಗೂ ಕಂಡುಬರುತ್ತವೆಯೇ ?
C) ಸೂಕ್ಷ್ಮಜೀವಿಗಳು ನಮ್ಮ ದೇಹದ ಒಳಗೂ ಕಂಡುಬರುತ್ತವೆಯೇ ?
D) ಸೂಕ್ಷ್ಮಜೀವಿಗಳು ಗಾಳಿಯಲ್ಲೂ ಕಂಡುಬರುತ್ತವೆಯೇ ?

ಈ ಕೆಳಗಿನ ಯಾವ ಕೌಶಲ್ಯಗಳನ್ನು ವಿದ್ಯಾರ್ಥಿಗಳಲ್ಲಿ/ ಕಲಿಕಾರ್ಥಿಗಳಲ್ಲಿ ಅಭಿವೃದ್ಧಿಸಲು / ಬೆಳೆಸಲು ಶಿಕ್ಷಕರು ಪ್ರಯತ್ನಿಸುತ್ತಿದ್ದಾರೆ ?

(1) ವೀಕ್ಷಣಾ ಕೌಶಲ್ಯ (2) ವರ್ಗೀಕರಣ ಕೌಶಲ್ಯ
(3) ಆಲೋಚಿಸುವ ಕೌಶಲ್ಯ (4) ಉದ್ವೇಗ / ಭಾವುಕ ಕೌಶಲ್ಯ

www.kpscvaani.com